"ಸರ್, ನನಗೇನೋ ಬಿಜುನೇ ಕೊಲೆ ಮಾಡಿದ್ದಾನೆ ಅಂತ ಅನಿಸುತ್ತಿದೆ... ನನ್ನ ಗಟ್ ಫೀಲಿಂಗ್." ಕಾನ್‌ಸ್ಟೆಬಲ್ ಸೀತಾರಾಮಯ್ಯ ಪೋಸ್ಟ್‌ಮಾರ್ಟಂ ರಿಪೋರ್ಟ್ ಎಸಿಪಿ ರುದ್ರೇಶ್‌ನ ಕೈಗೆ ಇಡುತ್ತಾ ನುಡಿದ.

ಲೂಸಿಯ ಸಾವಿನ ನಂತರದ ಮೂರು ದಿನಗಳಲ್ಲಿ ಸೀತಾರಾಮಯ್ಯ, ತನ್ನ ನೆಟ್‌ವರ್ಕ್‌ಗಳಿಂದ ಎಲ್ಲರ ಕಾಲ್ ರೆಕಾರ್ಡ್‌ಗಳು, ಕೊಲೆಯಾದ ಸಮಯದಲ್ಲಿ ಅವರಿದ್ದ ಜಾಗ, ಅವರಿಗಿದ್ದ ಅಲಬೈ ಎಲ್ಲಾ ಒಟ್ಟುಗೂಡಿಸಿ ತಂದು ರುದ್ರೇಶನ ಮುಂದೆ ಇಟ್ಟಿದ್ದ.

"ಇದೆಲ್ಲಾ ಇಟ್ಟುಕೊಂಡು ಅವನ ಮೇಲೆ ಸಂಶಯ ಪಡಬಹುದೇ ಹೊರತು, ಆರೋಪ ಹೊರಿಸಲು ಸಾಧ್ಯವಿಲ್ಲ."

ಸೀತಾರಾಮಯ್ಯ ನಿಂತೇ ಇದ್ದ.

"ನೋಡಿ ಈ ಪೋಸ್ಟ್‌ಮಾರ್ಟಂ ರಿಪೋರ್ಟ್ ಪ್ರಕಾರ, ಸಾವು ಸುಮಾರು ರಾತ್ರಿ ಒಂಬತ್ತರಿಂದ ಹತ್ತರ ಒಳಗೆ ನಡೆದಿದೆ. ಲೂಸಿ ರಾತ್ರಿ ಮಾಡಿದ ಊಟ ಅವಳ ಹೊಟ್ಟೆಯಲ್ಲಿ ಅರಗದೇ ಹಾಗೆಯೇ ಇದೆ. ಅಂದರೆ ಊಟ ಆದ ಸ್ವಲ್ಪ ಸಮಯದಲ್ಲಿಯೇ ಅವಳ ಸಾವು ಸಂಭವಿಸಿರಬೇಕು. ಅದೇ ಸಮಯಕ್ಕೆ ಬಿಜು ಅಲ್ಲೆಲ್ಲೋ ದಾಬಾದಲ್ಲಿ ತಡವಾಗಿ ಊಟ ಕೊಟ್ಟಿದ್ದಕ್ಕೆ ಗಲಾಟೆ ಮಾಡಿದ್ದಾನೆ. ಅದರ ಸಾಕ್ಷಿ ಕೂಡಾ ಇದೆ. ಹೀಗಿರುವಾಗ ಅವನ ಮೇಲೆ ಅನುಮಾನ ಪಡುವಂತಹದ್ದು ಏನಿದೆ? ಎಮೋಷನಲ್ ಆಗಿ ಯೋಚಿಸಬೇಡಿ, ಕೆಲವುಸಲ ನಮ್ಮ ಮನಸ್ಸಿಗೆ ಅನಿಸಿದ್ದು ಮಾತ್ರ ಸತ್ಯವಾಗಿರಲಿಕ್ಕಿಲ್ಲ. ನೀವೂ ಒಬ್ಬ ಹೆಣ್ಣುಮಗಳ ತಂದೆಯಲ್ಲವೇ, ಹಾಗಾಗಿ ನಿಮಗೆ ಈ ರೀತಿ ಭಾವನೆಗಳು ಬರುವುದು ಸಹಜ. ಅದೆಲ್ಲಾ ಬದಿಗಿಟ್ಟು ಒಮ್ಮೆ ತರ್ಕಬದ್ಧವಾಗಿ ಯೋಚಿಸಿ."

ರುದ್ರೇಶನ ವಯಸ್ಸಿಗಿಂತಾ ಸೀತಾರಾಮಯ್ಯನ ಅನುಭವ ಜಾಸ್ತಿ. ಅವನ ಮಾತುಗಳಿಗೆ ಯಾವಾಗಲೂ ಮನ್ನಣೆ ನೀಡುತ್ತಿದ್ದ ರುದ್ರೇಶ್. ಆದರೆ ಈ ವಿಷಯದಲ್ಲಿ ಅದೇಕೋ ಒಪ್ಪಲು ಅವನ ತರ್ಕ ಬಿಡುತ್ತಿರಲಿಲ್ಲ.

"ಬೇರೇ ಯಾರಿಂದಲಾದರೂ ಮಾಡಿಸಿರಬಹುದಾ ಸಾರ್?"

"ನಿಮಗೆ ಯಾಕೆ ಹಾಗೆ ಅನಿಸುತ್ತಿದೆ... ಎಲ್ಲಾ ಸಾಕ್ಷಿಗಳೂ ಲೂಸಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎನ್ನುವುದನ್ನೇ ಸೂಚಿಸುತ್ತಿವೆ, ಅಲ್ಲವೇ?"

"ಸರ್, ನನ್ನ ಸರ್ವೀಸಿನಲ್ಲಿ ಅದೆಷ್ಟೋ ಅಪರಾಧಗಳನ್ನು ನೋಡಿದ್ದೇನೆ. ಕೊಲೆಗಾರ ಎಷ್ಟೇ ಚಾಣಾಕ್ಷನಿದ್ದರೂ ಕೊಲೆ ಮಾಡಿದ ಜಾಗದಲ್ಲಿ ಎಲ್ಲಿಯೋ ಏನೋ ಒಂದು ಗಡಿಬಿಡಿ ಮಾಡಿರುತ್ತಾನೆ. ಅದು ಅವನಿಗಿರುವ ಅವ್ಯಕ್ತ ಭಯ! ಆದರೆ ಈ ಘಟನೆ ನೋಡಿ, ನನ್ನ ಸರ್ವೀಸ್‌ನಲ್ಲಿಯೇ ಇಷ್ಟು ನೀಟ್ ಆಗಿರೋ ಅಪರಾಧವನ್ನು ನೋಡಿಯೇ ಇಲ್ಲ. ಅದೇ ನನ್ನ ಮೊದಲ ಅನುಮಾನ. ಇದು ಯಾರೋ ಪಕ್ಕಾ ಯೋಜನೆ ರೂಪಿಸಿ ಮಾಡಿರುವ ಕೊಲೆ. ಅದಕ್ಕೆ ಇಂಥಾದ್ದೇ ದಿನ, ಸಮಯ ಹೀಗೆ ನಿಗದಿಯಾಗಿಯೇ ಮಾಡಿರಬೇಕು. ಅಂದರೆ ಅದು ಬಿಜು ಗೋವಾಗೆ ಟ್ರಿಪ್ ಹೋಗುವ ದಿನ, ಅವನು ಹೋದ ನಂತರದ ಸಮಯ. ಮೊದಲಿನಿಂದಲೂ ಟ್ರಿಪ್‌ಗೆ ಹೋಗುವುದಿಲ್ಲ ಅಂತ ಹೇಳುತ್ತಿದ್ದವನು ದಿಢೀರ್ ಆಗಿ ಮನಸ್ಸು ಬದಲಾಯಿಸಿ ಹೊರಟಿದ್ದಾನೆ. ಈ ಕೊಲೆ ಅವನನ್ನು ಬಿಟ್ಟು ಬೇರೆ ಯಾರಾದರೂ ಮಾಡಿದ್ದಾರೆ ಅಂತ ಅನ್ನುವುದಾದರೆ, ಅಷ್ಟು ಪರ್ಫೆಕ್ಟ್ ಪ್ಲಾನಿಂಗ್ ಮಾಡಿ ಮುಗಿಸುವುದು ಅಸಾಧ್ಯದ ಮಾತು ಅಲ್ಲವೇ ಸರ್?"

"ಥಿಯರಿಟಿಕಲಿ ನೀವು ಹೇಳುವುದನ್ನು ಒಪ್ಪಬಹುದಾದರೂ... ಅದನ್ನು ಪ್ರೂವ್ ಮಾಡುವುದು ಹೇಗೆ? ಅಲ್ಲದೇ ಅವರ ಫೋನ್ ರೆಕಾರ್ಡ್, ಅವನ ಸ್ನೇಹಿತರ ರೆಕಾರ್ಡ್ಸ್ ಎಲ್ಲಾ ಜಾಲಾಡಿದರೂ ಒಂದು ಸಣ್ಣ ಅನುಮಾನ ಕೂಡಾ ಬರುವಂತಾದ್ದು ಕಂಡಿಲ್ಲ. ಇನ್ನು ಯಾರೋ ಬೇರೆಯವರಿಗೆ